## ದಾಸ ಸಾಹಿತ್ಯದ ಆದ್ಯ ಪ್ರವರ್ತಕರಾದ ಯತಿವರ್ಯರಾದ
## ಶ್ರೀ ನರಹರಿ ತೀರ್ಥರು

ಆರಾಧನೆ – ಪುಷ್ಯ ಕೃಷ್ಣ ಪಕ್ಷ ಸಪ್ತಮೀ (ಹಂಪೆ)

ಸಸೀತಾ ಮೂಲರಾಮಾರ್ಚಾ ಕೋಶೇ ಗಜಪತೇಃ ಸ್ಥಿತಾ ।
ಯೇನಾನೀತಾ ನಮಸ್ತಸ್ಮೈ ಶ್ರೀಮನ್ನೃಹರಿಭಿಕ್ಷವೇ ॥

ತಾತ್ಪರ್ಯ : ಶ್ರೀಮದಾಚಾರ್ಯರ ಆಣತಿಯಂತೆ ಗಜಪತಿರಾಜನ ಕೋಶ(ಭಂಡಾರ)ದಲ್ಲಿದ್ದ ಬ್ರಹ್ಮಕರಾರ್ಚಿತವಾದ ಶ್ರೀಮೂಲರಾಮದೇವರು ಹಾಗೂ ಸೀತಾದೇವಿಯರನ್ನು ತಂದು ಒಪ್ಪಿಸಿದಂತಹ ಶ್ರೀಮನ್ನರಹರಿ ಭಿಕ್ಷುಗಳನ್ನು ನಮಸ್ಕರಿಸುತ್ತೇನೆ ಎಂಬುದಾಗಿ ಈ ಚರಮಶ್ಲೋಕದ ಭಾವವು.

### ಶ್ರೀನರಹರಿತೀರ್ಥರ ಸಂಕ್ಷಿಪ್ತ ಜೀವನ ಪರಿಚಯ

ಶ್ರೀನರಹರಿತೀರ್ಥರು, ಶ್ರೀಮದಾಚಾರ್ಯರ ಪೀಠವನ್ನು ಶ್ರೀಪದ್ಮನಾಭತೀರ್ಥರ ನಂತರ ಅಲಂಕರಿಸಿದರು . ಇವರ ಪೂರ್ವಾಶ್ರಮದ ಹೆಸುರ ಶ್ಯಾಮಾ ಶಾಸ್ತ್ರಿಗಳು ಅಥವಾ ಸ್ವಾಮಿ ಶಾಸ್ತ್ರಿಗಳೆಂದು. ಶ್ರೀಮದಾಚಾರ್ಯರು ಪ್ರಥಮ ಬದರೀಯಾತ್ರೆಯನ್ನು ಮಾಡಿದಾಗ ಆಚಾರ್ಯರ ಪ್ರಭಾವಕ್ಕೆ ಒಳಗಾಗಿ ಮಧ್ವಮತವನ್ನು ಒಪ್ಪಿ ಸನ್ಯಾಸವನ್ನು ಸ್ವೀಕರಿಸಿದರು. ಇವರು ಕಳಿಂಗದೇಶದ ಗಜಪತಿರಾಜನ ಆಸ್ಥಾನ ದಲ್ಲಿ ಕೋಶಾಧಿಕಾರಿಗಳಾಗಿದ್ದರು.

ಕಳಿಂಗದ ದೊರೆ ಗಜಪತಿಯು ಮೃತನಾಗಲು, ದೊರೆಯ ಪತ್ನಿಯು ಗರ್ಭವತಿಯಾಗಿದ್ದರಿಂದ ಹಾಗೂ ಉತ್ತರಾಧಿಕಾರಿಯಿಲ್ಲದ್ದರಿಂದ, ಆನೆಯ ಕೈಗೆ ಹೂಮಾಲೆ ನೀಡಿ, ರಾಜ್ಯದ ಉತ್ತರಾಧಿಕಾರಿಯನ್ನು ನಿರ್ಣಯಿಸಲು ರಾಜಪ್ರಮುಖರು ಪ್ರಯತ್ನಿಸಿದಾಗ, ಆನೆಯು ಇವರ ಕೊರಳಿಗೆ ಮಾಲೆ ಹಾಕಿ ರಾಜಪ್ರತಿ ನಿಧಿಯನ್ನಾಗಿ ಆಯ್ಕೆ ಮಾಡಿದ್ದರಿಂದ, ಕಳಿಂಗ ರಾಜ್ಯದ ಕಾರ್ಯಭಾರವನ್ನು ಹೊತ್ತವರು ಶ್ರೀನರಹರಿತೀ ರ್ಥರು. ನಂತರ ರಾಜ ಪತ್ನಿಯು ಗಂಡುಮಗುವನ್ನು ಹಡೆದಳು. ಆ ರಾಜಕುಮಾರನಿಗೆ 12ವರ್ಷ ವಯ ಸ್ಸಾಗುವವರೆಗೂ ಕಳಿಂಗ ದೇಶದ ರಾಜ್ಯಭಾರವನ್ನು ನಿರ್ವಹಿಸಿ ರಾಜ್ಯವನ್ನು ಪುನಃ ಗಜಪತಿಯ ವಂಶಕ್ಕೆ ಬಿಟ್ಟುಕೊಟ್ಟಿದ್ದು ಇವರ ಪರಿಶುದ್ಧವಾದ ಸನ್ಯಾಸಜೀವನಕ್ಕೆ ಕುರುಹಾಗಿದೆ.

ಈ ರಾಜ್ಯರಕ್ಷಣೆ ಮಾಡಿದ ಮಹತ್ತರವಾದ ಉಪಕಾರಕ್ಕಾಗಿ, ಕೃತಜ್ಞತೆಯಿಂದ ಪ್ರತ್ಯುಪಕಾರವನ್ನು ಮಾಡಲು ರಾಜಮನೆತನದವರು, ತಾವು ಸನ್ಯಾಸಿಗಳಾಗಿದ್ದರೂ ಏನನ್ನಾದರು ಪರಿಗ್ರಹಿಸುವಂತೆ ಪ್ರಾರ್ಥಿಸಿದಾಗ, ತಮಗೆ ಹಿಂದೆ ಶ್ರೀಮನ್ಮಧ್ವಾಚಾರ್ಯರು ಆಜ್ಞೆಯಿತ್ತಂತೆ ಕಳಿಂಗ ರಾಜನ ಕೋಶದಲ್ಲಿದ್ದ ಬ್ರಹ್ಮಕರಾರ್ಚಿತ ರಾಮ ಸೀತಾ ಪ್ರತಿಮೆಗಳನ್ನು ತಂದು ಉತ್ಥಾನದ್ವಾದಶಿಯ ದಿನ ಶ್ರೀಮದಾಚಾರ್ಯರಿಗೆ ಒಪ್ಪಿಸಿದರು. ಇವರು ಶ್ರೀಮದಾಚಾರ್ಯರ ಪ್ರಥಮ ಶಿಷ್ಯರಾದ ಪದ್ಮನಾಭತೀರ್ಥರ ನಂತರ ಆಚಾರ್ಯರ ಪೀಠವನ್ನು ಅಲಂಕರಿಸಿದರು. ಶ್ರೀಮದಾಚಾರ್ಯರ ಗ್ರಂಥಗಳಿಗೆ ಪದ್ಮನಾಭತೀರ್ಥರ ನಂತರ ಟೀಕೆಯನ್ನು ರಚಿಸಿದ ಎರಡನೆ ಯತಿವರ್ಯರಾಗಿದ್ದಾರೆ. ಇವರ ಕೃತಿ – ಯಮಕಭಾರತದ ಟೀಕೆ, ಗೀತಾಭಾಷ್ಯ ಭಾವ ಪ್ರಕಾಶಿಕಾ ಎಂಬುವುದಾಗಿದೆ. ಶ್ರೀಮದಾಚಾರ್ಯರ ಪೀಠವನ್ನು ಶ್ರೀಪದ್ಮನಾಭತೀರ್ಥರ ನಂತರ ಕ್ರಿ. ಶ. 1205ರಿಂದ 1214 ರವರೆಗೆ ಸುಮಾರು 9ವರ್ಷಗಳ ಪಟ್ಟವಾಳಿದವರು ಎಂದು ಅಭಿಪ್ರಾಯಪಡಲಾಗಿದೆ.

ಇವರ ಇನ್ನೊಂದು ಮಹತ್ತರವಾದ ಕೊಡುಗೆ ಎಂದರೆ ಇವರಿಂದ ಆಡು ನುಡಿಯಾದ ಕನ್ನಡದಲ್ಲಿ ದೇವರ ನಾಮಗಳನ್ನು ರಚಿಸಿಲ್ಪಟ್ಟಿತು. ಇದರಿಂದ ಕನ್ನಡ ನುಡಿಯಲ್ಲಿ ದಾಸಸಾಹಿತ್ಯದ ಪ್ರಕಾರಕ್ಕೆ ಶ್ರೀಕಾರ ಹಾಕಿದ ಮೊದಲ ಯತಿವರ್ಯರು ಎಂಬ ಕೀರ್ತಿಗೆ ಇವರು ಭಾಜನರಾಗಿದ್ದಾರೆ. ರಘುಪತಿ ಎಂಬ ಅಂಕಿತ ದಿಂದ ಇವರು ದೇವರನಾಮಗಳನ್ನು ರಚಿಸಿದರು. ಭಾಗವತ ಸಂಪ್ರದಾಯದ ಯಕ್ಷಗಾನ ಕಲೆಯ ಪ್ರವರ್ತಕರೆಂಬ ಖ್ಯಾತಿಯೂ ಸಹ ಇವರಿಗಿದೆ. ಹಂಪೆಯಲ್ಲಿ ಚಕ್ರತೀರ್ಥದ ಬಳಿ ತುಂಗಭದ್ರಾನದಿಯ ಮಧ್ಯೆ ಬಂಡೆಯ ಮೇಲೆ ಇವರ ವೃಂದಾವನವಿದೆ.

## ಶ್ರೀನರಹರಿತೀರ್ಥರ ಶ್ರೀಕೂರ್ಮ ಶಾಸನ

ಈಗಿನ ಆಂಧ್ರಪ್ರದೇಶದ ಶ್ರೀಕಾಕುಳಂ ಜಿಲ್ಲೆಯಲ್ಲಿ ಶ್ರೀಕೂರ್ಮಕ್ಷೇತ್ರವು ಇದೆ. ಇಲ್ಲಿರುವ ಶಾಸನದಲ್ಲಿ ಶ್ರೀನರಹರಿತೀರ್ಥರು ಶ್ರೀಮದಾಚಾರ್ಯರ ಶಿಷ್ಯರಾಗಿ ಸಲ್ಲಿಸಿದ ಸೇವೆಯ ಹಾಗೂ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದ್ದರ ವಿವರವಿದೆ. ಪ್ರಕೃತ ಶಾಸನದಿಂದ ಈ ಕೆಳಗೆ ಉದ್ಧೃತವಾದುದರ ಸಾರಾಂಶವು ಮುಂದಿನಂತಿದೆ – ಶ್ರೀಮನ್ನರಹರಿತೀರ್ಥರು ಶ್ರೀಕೂರ್ಮದೇವಸ್ಥಾನವನ್ನು ರಕ್ಷಿಸಲು ದೀಕ್ಷಾಬದ್ಧರಾಗಿ, ಅಲ್ಲಿನ ಶಬರಸೈನ್ಯದೊಂದಿಗೆ ಹೋರಾಡಿ, ಅವರನ್ನೆಲ್ಲಾ ಸಂಪೂರ್ಣವಾಗಿ ಸೋಲಿಸಿ, ಅವರ ವಶದಲ್ಲಿದ್ದ ದೇವಸ್ಥಾನವನ್ನು, ಪ್ರಹ್ಲಾದನು ನರಸಿಂಹನನ್ನು ಸಂತೋಷಗೊಳಿಸಿದಂತೆ ಶಾಲಿವಾಹನ ಶಕೆ 1203 (ಕ್ರಿ.ಶ.1281)ರ ಮೇಷಮಾಸದ ಶುಕ್ಲಪಕ್ಷದ ಸೋಮವಾರದಂದು ಸಾಲಿಗ್ರಾಮ ಶಿಲೆಯ ಶ್ರೀಕೂರ್ಮ ಹಾಗೂ ಯೋಗಾನಂದ ನರಸಿಂಹ ದೇವರ ದೇವಸ್ಥಾನವನ್ನು ಪರಮಾತ್ಮನ ಪ್ರೀತ್ಯರ್ಥವಾಗಿ ನಿರ್ಮಾಣ ಮಾಡಿಸಿದರು ಎಂದಿದೆ.

ದೇವಃ ಶ್ರೀಕಮಲಾವಿಲಾಸಲಹರೀಪಾತ್ರಂ ಕಲಿಪ್ರೋಲ್ಲಸತ್ ।
ಇತ್ಯಾದಿ ಪ್ರಾರಂಭವಾಗಿ, ಮುಂದೆ 7ನೇ ಶ್ಲೋಕದಲ್ಲಿ –
ಯಶ್ಚಶ್ರೀಕಮಠಾಧಿನಾಯಕಮಹಾಕಾರ್ಯೈಕ ಬದ್ಧವ್ರತಃ ।
ತಸ್ಯ ಪ್ರಚ್ಯುತಿ ವಾರಣಾಯ ಶಬರಾನೀಕಕ್ಷಿತಿಶ್ಚಾನ್ನಿಶಮ್ ।
ಧತ್ತೇ ಸತ್ಕರವಾಲಮಸ್ಯ ತಟಿತಾ ಸಂತ್ಯಕ್ತಜೀವೇರಿಪೌ ।
ಹಂತವ್ಯಾನವಶೇಷಣಾತ್ ನಿಜವಿಧಿರ್ನೋ ಯಸ್ಯ ಬೋಧ್ಯ ಸ್ತರಾಮ್ ॥ 7 ॥
ತೇನಾನೇನ ಶ್ರೀಮನ್ನರಹರಿತೀರ್ಥಾಖ್ಯಯತಿವರೇಣ್ಯೇನ ।
ಕಲಿಸಮಯ ಪ್ರಹ್ಲಾದ ಪರಿತೋಷಿತ ನೃಹರಿರೂಪೇಣ ॥ 8 ॥
ಸ್ವಸ್ತಿ ಶ್ರೀಶಕವತ್ಸರೇ ಹುತವಹವ್ಯೋಮದ್ವಯಕ್ಷ್ಮಾಯುತೇ ।
ಮೇಷೇ ಶುಕ್ಲಶಶಾಂಕಶೇಖರ ದಿನೇ ವಾರೇ ಚ ಸೌಮ್ಯೇ ವರೇ ।
ಪ್ರಾಸಾದಂ ಕಮಠಾಧಿಪಸ್ಯ ಪುರತೋ ನಿರ್ಮಾಯ ಶರ್ಮಪ್ರದೋ ।
ಯೋಗಾನಂದನೃಸಿಂಹ ಏಷ ಭಗವಾನ್ ಪ್ರೀತ್ಯಾಪ್ರತಿಷ್ಠಾಪಿತಃ ॥ 9 ॥

## ಶ್ರೀನರಹರಿತೀರ್ಥರ ಎರಡು ದೇವರ ನಾಮಗಳು ಮುಂದಿನಂತಿವೆ –

1. ಶ್ರೀನರಹರಿತೀರ್ಥರು ತಾವು ಲೌಕಿಕವಾಗಿ ಕಳಿಂಗರಾಜ್ಯದಲ್ಲಿ ಅತ್ಯಂತ ಉನ್ನತವಾದ ಪದವಿ ಯನ್ನು ಅಲಂಕರಿಸಿ ರಾಜ್ಯವಾಳಿದ್ದರೂ ಸಹ, ರಾಜಾಧಿರಾಜನಾದ ಸರ್ವೋತ್ತಮನಾದ ಶ್ರೀಹರಿಯನ್ನು

ದಾಸ್ಯಭಾವದಿಂದ ಅತ್ಯಂತ ಭಕ್ತಿಯಿಂದ ಸ್ತುತಿಸಿ, ಹರಿದಾಸರಲ್ಲಿರಬೇಕಾದ ಆತ್ಮಸಮರ್ಪಣಾ ಭಾವವನ್ನು ಈ ಕೃತಿಯಲ್ಲಿ ನಿರೂಪಿಸುತ್ತಾ, ಸಮಸ್ತರೂ ಶ್ರೀಹರಿಯಲ್ಲಿ ಶರಣಾಗಬೇಕಾದ ಮಾರ್ಗವನ್ನು ಕನ್ನಡದಲ್ಲಿ ತಿಳಿಸಿಕೊಟ್ಟಿದ್ದಾರೆ.

ರಾಗ : ಭೈರವಿ ತಾಳ : ಆದಿತಾಳ
ಎಂತು ಮರುಳಾದೆ। ನಾ।ನೆಂತು ಮರುಳಾದೆ॥ ಪಲ್ಲವಿ॥
ಎಂತು ಮರುಳಾದೆ। ಭವದೊಳು ಬಳಲಿದೆ।
ಸಂತತ ಪೊರೆ ರಘು।ಕುಲತಿಲಕಾ ॥ ಅನುಪಲ್ಲವಿ ॥
ಮಾತಿನಲ್ಲಿ ಹರಿದಾಸತನ। ನೀತಿಯಲ್ಲಿ ಪ್ರಭುದಾಸತನ।
ಪ್ರೀತಿ ಧನಾದಿ ವಿಷಯದಲ್ಲಿ। ನಿ।ರ್ಭೀತಿ। ದೈವಗುರುದ್ರೋಹದಲಿ ॥ 1 ॥
ಏಕಾಂತದಲ್ಲಿ ಧನದ ಗೋಷ್ಠಿ। ಲೋಕಾಂತದಿ ವೈರಾಗ್ಯದ ಗೋಷ್ಠಿ।
ಶ್ರೀಕಾಂತನ ಸೇವೆಗೆ ಅನುಮಾನ। ಭೂಕಾಂತನ ಸೇವೆಗೆ ಸುಮ್ಮಾನ ॥ 2 ॥
ಧರ್ಮಕ್ಕೆ ಒಂದು ಕಾಸು ಸಾವಿರಹೊನ್ನು। ಅ।ಧರ್ಮಕ್ಕೆ ಕೋಟಿ ಹೊನ್ನು ಒಂದೇ ಕಾಸು।
ಧರ್ಮ ಮಾಡಲು ಬೇಸರಿಕೆ। ಅ।ಧರ್ಮ ಮಾಡಲು ಎಚ್ಚರಿಕೆ ॥ 3 ॥
ಡೊಂಬನಂತೆ ಬಯಲಿಗೆ ಹರಹಿ। ಡಂಭತನಕೆ ಕರ್ಮವ ಮಾಡಿ।
ಅಂಬುಜನಾಭಗೆ ದೂರಾಗಿ। ಕುಂಭೀಪಾಕಕೆ ಗುರಿಯಾದೆ ॥ 4 ॥
ಸತಿಯರ ಬೈದರೆ ನಾ ಬೈವೆ। ಶ್ರೀ।ಪತಿಯ ಬೈದರೆ ಕೇಳುತ ನಗುವೆ।
ಮತಿಗೆಟ್ಟು ವಿಷಯ ಲಂಪಟನಾಗಿ.........
..................(5ನೇ ನುಡಿಯ ಒಂದು ಸಾಲು ಅನುಪಲಬ್ಧ)॥ 5 ॥
ಯಾರಿಗಾಗಿ ಧಾವತಿ ಪಡುವೆ। ಇ।ನ್ನಾರಿಗೆ ಒಡವೆಯ ಬಚ್ಚಿಡುವೆ।
ನಾರಿಪುತ್ರ ಮಿತ್ರಾದಿಗಳು। ಯಾರು ಬಾರರೋ ಸಂಗಡದೀ ॥ 6 ॥
ಭಜಿಸು ಬ್ರಹ್ಮಾದಿ ವಂದಿತ ಹರಿಯ। ತ್ಯಜಿಸು ಕಾಮಾದಿ ದುರ್ವಿಷಯ।
ಸುಜನವಂದಿತನಾದ ನರಹರಿಯ। ಭಜಿಸು ಶ್ರೀಶ ಶ್ರೀರಘುಪತಿಯಾ ॥ 4 ॥

2) ಈ ಕೃತಿಯಲ್ಲಿ ಶ್ರೀಹರಿಯ ಶರಣಾಗತವತ್ಸಲತೆಯನ್ನು ನಿರೂಪಿಸಿ, ಹರಿದಾಸನಾದವ ಪರಮಾತ್ಮನ ಕರುಣೆಯನ್ನು ಮಾತ್ರ ಅಪೇಕ್ಷಿಸಿಕೊಂಡು ಭಕ್ತಿಯಿಂದ ಕೂಡಿ ಕಾಯುತ್ತಿರಬೇಕೆಂಬ ಸಂದೇಶವನ್ನು ತಿಳಿಸಿ ಕೊಟ್ಟಿದ್ದಾರೆ.

ಹರಿಯೇ। ಇದು। ಸರಿಯೇ ॥ ಪಲ್ಲವಿ ॥
ಚರಣ ಸೇವಕನಲ್ಲಿ। ಕರುಣ ಬಾರದ್ಯಾಕೆ ॥ ಅನು ಪಲ್ಲವಿ ॥
ಪತಿತನೆಂದು ಶ್ರೀಪತಿ ರಕ್ಷಿಸದಿರೆ।
ವಿತತವಾಹುದೆ ನಿನ್ನ ಪತಿತಪಾವನ ಕೀರ್ತಿ ॥ 1 ॥
ಶಕ್ತ ನೀನಾಗಿದ್ದು ಭಕ್ತನುಪೇಕ್ಷಿಸೆ।
ಭಕ್ತವತ್ಸಲನಾಮ ವ್ಯರ್ಥವಾಗದೆ ॥ 2 ॥

ದಿಗಿಲಿಲ್ಲದೆ ಒದ್ದ ಭೃಗುವ ಪಾಲಿಸಿದೆ।
ನಗಧರ ಎನ್ನ ಬಿಡುವ ಬಗೆ ಏನಿದು ॥ 3 ॥
ಹೇಯ ಅಜಾಮಿಳನ ಕಾಯಲಿಲ್ಲೆ। ಸ್ವ।
ಕೀಯನೆ, ನಾ ಪರಕೀಯನೆ ನಿನಗೆ ॥ 4 ॥
ಉಂಟು ಹಿರಣ್ಯಕನ ಕಂಟಕ ಬಿಡಿಸಿದ್ದು।
ನಂಟನೆ ನಿನಗೆ ಭಂಟ ನಾನಲ್ಲವೆ ॥ 5 ॥
ಕೆಟ್ಟ ಅಹಲ್ಯೆಯ ದಿಟ್ಟ ಪಾಲಿಸಿದೆ।
ಕೊಟ್ಟಳು ಅವಳೇನ ಬಿಟ್ಟದ್ದು ನಾನೇನ ॥ 6 ॥
ದೊರೆ ನಿನ್ನ ಮನಸಿಗೆ ಸರಿಬಂದಂತೆ ಮಾಡು।
ಮೊರೆಹೊಕ್ಕೆನು ನಾ ನರಹರಿಪೂರ್ಣನೆ ॥ 7 ॥

– ಸಂಗ್ರಹ : ಯಲಮೇಲಿ ಪುಷ್ಪಹಾಸ ಬಾಲಕೃಷ್ಣ
ಬೆಂಗಳೂರು